ನಿಂತ. ಎಲ್ಲರೂ ನವಲಗುಂದದ ಬಸ್ ಹತ್ತಿದರು. ಬಸ್‌ನಲ್ಲಿ ಎಲ್ಲರೂ, 'ಹಾಗ್ಯಾಕ ಮಾಡಿದಿ' ಎಂದು ಮಂಗಳಾರತಿ ಎತ್ತಿದರು. ಇವನಿಗೆ ಏನೂ ತಿಳಿಯದಂತಾಗಿ ಅವಮಾನದಲ್ಲಿ ಕುದ್ದು ಹೋದ.

ಒಂದೆರಡು ದಿನದ ನಂತರ ಕನ್ಯೆಯ ಮನೆಯವರು, 'ಹುಡುಗ ನೋಡಾಕ ಚೊಲೋ ಅದಾನ. ಆದ್ರ ಒಂದು ನಮೂನಿ ಮಾಡ್ತಾನ. ಅದ್ಕ ನಾವು ಕನ್ಯೆ ಕೊಡಲ್ಲ...' ಎಂದು ತಿಳಿಸಿದರು. ಬಸಪ್ಪ, ಪಾರಮ್ಮ ಮಗನ ಈ ಅವಸ್ಥೆ ಕಂಡು ಚಿಂತೆಗೀಡಾದರು. ಕನ್ಯೆ ನೋಡಲು ಜೊತೆಗೆ ಹೋಗಿದ್ದ ಸಾವಂತ್ರೆಮ್ಮ ಅಲ್ಲಿ ನಡೆದ ಘಟನೆಯನ್ನು ಅವರಿವರಿಗೆ ಹೇಳಿದ್ದಳು. ಕೆಲವರು ಅಪಹಾಸ್ಯ ಮಾಡಿ ನಗಾಡಿದ್ದರು. ಇದು ಪಾರವ್ವನ ಕಿವಿಗೂ ತಲುಪಿ ಕಣ್ಣೀರಾಗಿದ್ದಳು. ಹೇಗಾದರೂ ಮಾಡಿ ಮದುವೆ ಮಾಡಬೇಕು ಅಂದುಕೊಂಡಳು. ಯಮನೂರಪ್ಪನಿಗೆ, 'ಈ ಸಲ ಕನ್ಯೆ ನೋಡಾಕ ಹೋದಾಗ ಮಲ್ಲಿಗೆ ಹೂ ಮುಟ್ಟ ಬ್ಯಾಡ ನೀನು. ಕನ್ಯೆ ಕೊಡೋ ತನಕ ಹ್ಯಾಗಾದ್ರೂ ಮಾಡು. ಲಗ್ನ ಆಗಿಂದ ಏನಾದ್ರೂ ನಡಿಯುತ್ತ...' ಎಂದು ಬುದ್ಧಿವಾದ ಹೇಳಿದಳು. ಯಮನೂರಪ್ಪನೂ ಒಪ್ಪಿಕೊಂಡ.

ಮತ್ತೊಂದು ಚೊಲೋ ದಿನ ನೋಡಿಕೊಂಡು ರೋಣಕ್ಕೆ ಕನ್ಯೆ ನೋಡಲು ತೆರಳಿದರು. ಬಸಪ್ಪ, ಪಾರಮ್ಮ ಕನ್ಯೆಯ ಮನೆಯಲ್ಲಿ ಇವನಿಗೆ ಮಲ್ಲಿಗೆ ಹೂ ಸಿಗದಂತೆ ಕಣ್ಗಾವಲಿಟ್ಟಿದ್ದರು. ಯಮನೂರಪ್ಪನ ಬಲ ಬದಿಯಲ್ಲಿ ಬಸಪ್ಪ, ಪಾರಮ್ಮ ಕುಳಿತಿದ್ದರು. ಇವರ ಮುಂದೆ ಮಣೆ ಹಾಕಿದರು. ಇನ್ನೇನು ಹುಡುಗಿಯನ್ನು ಮಣೆಯ ಮ್ಯಾಲೆ ಕುಂದರಿಸಬೇಕಿತ್ತು. ಐದಾರು ವಯಸ್ಸಿನ ಹುಡುಗಿ ಯಮನೂರಪ್ಪನ ಎಡಗಡೆ ಬಂದು ಕುಳಿತಿತು. ಆ ಹುಡುಗಿ ಮಲ್ಲಿಗೆ ಹೂ ಮುಡಿದಿತ್ತು. ಇವನ ಪಕ್ಕದಲ್ಲೇ ಆ ಹುಡುಗಿ ಕುಳಿತಿದ್ದರಿಂದ ಮಲ್ಲಿಗೆ ಘಮ ಇವನ ಮೂಗು ತಾಗಿತು. ನಾಕೈದು ನಿಮಿಷ ಕಳೆದಿರಬೇಕು. ಯಮನೂರಪ್ಪ ತನಗೇ ಗೊತ್ತಾಗದಂತೆ ಮೈ ಮರೆತ. ಕಣ್ಮುಚ್ಚಿ ಕನಸಿನ ಲೋಕಕ್ಕೆ ಜಾರಿದ. ಪಾರಮ್ಮ ಇವನನ್ನು ಆತಂಕದ ಕಣ್ಣಿಂದ ದಿಟ್ಟಿಸಿದಳು. ಯಮನೂರಪ್ಪನ ತುಟಿಗಳು ಮಂದಹಾಸ ಚೆಲ್ಲತೊಡಗಿದ್ದವು.

## ಟಿ.ಎಸ್. ಗೊರವರ

ಲೇಖಕರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ರಾಜೂರ ಗ್ರಾಮದವರು. ರಾಜೂರು, ಗಜೇಂದ್ರಗಡದಲ್ಲಿ ವಿದ್ಯಾಭ್ಯಾಸ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು ಕೆಲಕಾಲ ಪತ್ರಕರ್ತರಾಗಿದ್ದರು.

ಪ್ರಕಟಿತ ಪುಸ್ತಕಗಳು: 'ಭ್ರಮೆ', 'ಕುದರಿ ಮಾಸ್ತರ' (ಕಥಾ ಸಂಕಲನಗಳು), 'ಆಡು ಕಾಯೋ ಹುಡುಗನ ದಿನಚರಿ'(ಅನುಭವ ಕಥನ), 'ರೊಟ್ಟಿ ಮುಟಗಿ'(ಕಾದಂಬರಿ).